ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 109-117
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ದ್ರಾಕ್ಷಿ ತೋಟದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಸ್ಥಿತಿಗತಿ

**ತೇಜಶ್ವಿನಿ ಚಾಂದಕವಟೆ[1] & ಪ್ರೊ. ಹೇಮಲತ ಎಚ್.ಎಂ[2].**

[1]ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

[2]ಪ್ರಾಧ್ಯಾಪಕರು, ಹೊರಾವರಣ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ, ಮಂಡ್ಯ.

***Abstract:***

*ಆಹಾರ ಬೆಳೆಗಳಿಗೆ ಸೀಮಿತವಾಗಿದ್ದ ಕೃಷಿಯು ಹೆಚ್ಚು ಹಣ್ಣು, ತರಕಾರಿ ಬೆಳೆದು ವಾಣಿಜ್ಯ ಕ್ಷೇತ್ರವಾಗಿ ವಿಸ್ತಾರಗೊಂಡಿತು. ಕೃಷಿಯಿಂದ ವಾಣಿಜ್ಯ ಬೆಳೆಗಳನ್ನು ಸಂಪೂರ್ಣವಾಗಿ ಬೇರ್ಪಡಿಸಲಾಗದಿದ್ದರೂ ಬೆಳೆಗಳ ಅವಧಿ, ಲಕ್ಷಣ, ನಿರ್ವಹಣೆ, ಮಾರುಕಟ್ಟೆ ಮುಂತಾದ ವಿಷಯಗಳು ಭಿನ್ನವಾಗಿವೆ. ವಾಣಿಜ್ಯ ಬೆಳೆಗಳನ್ನು ಆಯಾ ಪ್ರದೇಶದ ಹವಾಗುಣಕ್ಕನುಗುಣವಾಗಿ ಬೆಳೆಯಲಾಗುತ್ತದೆ. ಭಾರತದಲ್ಲಿ 296.65 ಮಿಲಿಯನ್ ಟನ್‌ಗಳಷ್ಟು ಆಹಾರ ಬೆಳೆಗಳನ್ನು ಮತ್ತು 319.57 ಮಿಲಿಯನ್ ಟನ್‌ಗಳಷ್ಟು ವಾಣಿಜ್ಯ ಬೆಳೆಗಳನ್ನು ಉತ್ಪಾದಿಸಲಾಗಿದೆ. (2019–20). ತೋಟಗಾರಿಕೆ ಕೃಷಿಯು ಒಂದು ವಾಣಿಜ್ಯ ಕೃಷಿಯಾಗಿದ್ದು, ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಕಳೆದ 2 ದಶಕಗಳಲ್ಲಿ ವಾಣಿಜ್ಯ ಬೆಳೆಯ ಬೆಳವಣಿಗೆಯು 5.5%ರಷ್ಟಾಗಿದೆ. ವಾಣಿಜ್ಯ ಬೆಳೆಗಳನ್ನು ಲಾಭದ ಉದ್ದೇಶಕ್ಕಾಗಿ ಬೆಳೆಯುತ್ತಾರೆ. ತೋಟದಲ್ಲಿ ವರ್ಷವಿಡಿ ಒಂದೇ ಬೆಳೆಯನ್ನು ಬೆಳೆಯಲಾಗುತ್ತದೆ. ಇದು ಕೃಷಿ ಕುಟುಂಬಕ್ಕೆ ಮಾತ್ರವಲ್ಲದೆ ಭೂರಹಿತ ಕುಟುಂಬಗಳಿಗೆ ವಿಶೇಷವಾಗಿ ಮಹಿಳೆಯರಿಗೆ ಉದ್ಯೋಗವನ್ನು ಒದಗಿಸುತ್ತದೆ. ಪ್ರಸ್ತುತ ಲೇಖನದಲ್ಲಿ ದ್ರಾಕ್ಷಿ ತೋಟದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಸ್ಥಿತಿಗತಿ ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ಕೃಷಿ, ತೋಟಗಾರಿಕೆ, ದ್ರಾಕ್ಷಿ ಬೆಳೆ, ಮಹಿಳಾ ಕಾರ್ಮಿಕರು, ವೇತನ ತಾರತಮ್ಯ.*

## ಪೀಠಿಕೆ

ಮೊಘಲರ ಕಾಲದಲ್ಲಿ ಅಂದರೆ 16 ಮತ್ತು 19ನೇ ಶತಮಾನದ ಮಧ್ಯಭಾಗದಲ್ಲಿ ಭಾರತಕ್ಕೆ ತೋಟಗಾರಿಕೆಯನ್ನು ಪರಿಚಯಿಸಲಾಯಿತು. ನಂತರ ಇಂಗ್ಲಿಷ್ ಬ್ಯಾಪಿಸ್ಟ್ ಮಿಷನರಿ ರೆವ್ ವಿಲಿಯಂ ಕ್ಯಾರಿ ಅವರು 1820 ರಲ್ಲಿ ದೇಶದಲ್ಲಿ ಕೃಷಿಯ ಪ್ರಚಾರ ಮತ್ತು ಅಭಿವೃದ್ಧಿಗಾಗಿ ಭಾರತದಲ್ಲಿ ಅಗ್ರಿ ಹಾರ್ಟಿಕಲ್ಚರಲ್ ಸೊಸೈಟಿಯನ್ನು ಸ್ಥಾಪಿಸಿದರು. ಭಾರತೀಯ ಸಮಾಜವು ಸಂಪೂರ್ಣವಾಗಿ ಮರೆತಿರುವ ವಿವಿಧ ರೀತಿಯ ತರಕಾರಿಗಳು, ಹಣ್ಣು ಹಂಪಲಗಳು, ಗಿಡಮೂಲಿಕೆಗಳನ್ನು ಸಂಗ್ರಹಿಸಿ ಅವುಗಳನ್ನು ಮಾರುಕಟ್ಟೆಗೆ ಪರಿಚಯಿಸುವುದು ಈ ಸೊಸೈಟಿಯ ಉದ್ದೇಶವಾಗಿತ್ತು.

ಕರ್ನಾಟಕದಲ್ಲಿ ತೋಟಗಾರಿಕೆಯ ಬೆಳವಣಿಗೆಯು ಅದ್ಭುತವಾದ ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ. ರಾಜ್ಯದಲ್ಲಿ ಹಲವಾರು ತೋಟಗಾರಿಕೆ ಬೆಳೆಗಳನ್ನು ಅನಾದಿಕಾಲದಿಂದಲೂ ಬೆಳೆಯಲಾಗುತ್ತಿದ್ದರೂ,

***Please cite this article as:*** ತೇಜಶ್ವಿನಿ ಚಾಂದಕವಟೆ & ಹೇಮಲತ ಎಚ್.ಎಂ. (2024). ದ್ರಾಕ್ಷಿ ತೋಟದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಸ್ಥಿತಿಗತಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 109–117.

ವಾಣಿಜ್ಯ ಪ್ರಮಾಣದ ಬೇಸಾಯವು ಕೇವಲ ಎರಡೂವರೆ ಶತಮಾನಗಳ ಹಿಂದೆಯಷ್ಟೇ ಪ್ರಾರಂಭವಾಗಿದೆ.

ವಿಜಯಪುರ ಜಿಲ್ಲೆಯ ಹವಾಗುಣವು ಮುಂಜಾನೆ ಬಿಸಿಲಿನಿಂದ ಕೂಡಿದ್ದು ರಾತ್ರಿ ತಂಪಾಗಿರುತ್ತದೆ. ವಾಣಿಜ್ಯ ಬೆಳೆಗಳು ಮತ್ತು ತೋಟಗಾರಿಕೆಯ ಬೆಳೆಗಳನ್ನು ಬೆಳೆಯಲು ಭೂಮಿ ಉತ್ತಮವಾಗಿದೆ. ಅಧಿಕ ಇಳುವರಿಯನ್ನು ಪಡೆಯಬಹುದಾಗಿದೆ. ಜಿಲ್ಲೆಯಲ್ಲಿ ದ್ರಾಕ್ಷಿಯ ಜೊತೆಗೆ ಇತರೆ ವಾಣಿಜ್ಯ ಬೆಳೆಗಳಾದ ಬಾಳೆ, ನಿಂಬೆ, ಪೈನಾಪಲ್, ಪಪ್ಪಾಯ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ದ್ರಾಕ್ಷಿಯನ್ನು ಸುಮಾರು 13,400 ಹೆಕ್ಟರ್‌ಗಳಷ್ಟು ಬೆಳೆಯಲಾಗುತ್ತದೆ. ಇದರಲ್ಲಿ ಸುಮಾರು 12,730 ಹೆಕ್ಟರ್(95%) ರಷ್ಟು ದ್ರಾಕ್ಷಿಯನ್ನು ಒಣದ್ರಾಕ್ಷಿಯನ್ನಾಗಿ ಮಾಡಿ ಮಾರಲಾಗುತ್ತದೆ. ಇದರಿಂದ ವರ್ಷಕ್ಕೆ ಅಂದಾಜು ಸುಮಾರು 1300 ರಿಂದ 1600 ಕೋಟಿ ಲಾಭವಾಗುತ್ತದೆ.

ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಮಹಿಳಾ ಕಾರ್ಮಿಕರ ಪಾತ್ರ ಪ್ರಮುಖವಾಗಿರುತ್ತದೆ. ಮಹಿಳೆಯರು ಸಸಿಗಳನ್ನು ನೆಡುವುದರಿಂದ ಹಿಡಿದು ಬೆಳೆಗಳನ್ನು ಮಾರುಕಟ್ಟೆಗೆ ಮಾರಲು ಡಬ್ಬಿಗಳಲ್ಲಿ ತುಂಬುವವರೆಗೂ ಕೆಲಸ ಮಾಡುತ್ತಾರೆ. ಆದರೆ ಕೃಷಿ ಅಸಂಘಟಿತ ವಲಯದ ಭಾಗವಾಗಿರುವುದರಿಂದ ಅಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಶ್ರಮಕ್ಕೆ ತಕ್ಕ ಕೂಲಿ ಸಿಗುತಿಲ್ಲ ಮತ್ತು ಅವರ ದುಡಿಮೆಯನ್ನು ಗುರುತಿಸುತ್ತಿಲ್ಲ ಮತ್ತು ಮಹಿಳೆಯರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಯನ್ನು ಮತ್ತು ದುಡಿಮೆಯ ಸ್ವರೂಪವನ್ನು ತಿಳಿಯುವುದು ಬಹಳ ಮುಖ್ಯವಾಗಿದೆ.

**ಉದ್ದೇಶಗಳು**

- ದ್ರಾಕ್ಷಿ ತೋಟದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಸ್ಥಿತಿಗತಿ ತಿಳಿಯುವುದು.
- ತೋಟಗಾರಿಕೆಯಲ್ಲಿ ಮಹಿಳೆಯರ ದುಡಿಮೆಯ ಸ್ವರೂಪವನ್ನು ಅರಿಯುವುದು.

**ಅಧ್ಯಯನ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ ಕೈಪಿಡಿ, ಅವಲೋಕನ, ಸಮೀಕ್ಷೆ ವಿಧಾನಗಳಿಂದಲೂ ಹಾಗೂ ಮಾಧ್ಯಮಿಕ ಮಾಹಿತಿಯನ್ನು ಗ್ರಂಥಗಳು, ವರದಿಗಳು, ಲೇಖನಗಳು ಹಾಗೂ ಇತರೆ ಮೂಲಗಳಿಂದಲೂ ಸಂಗ್ರಹಿಸಲಾಗಿದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ವಿಜಯಪುರ ಜಿಲ್ಲೆಯ ತಿಕೋಟಾ ಮತ್ತು ಬಬಲೇಶ್ವರ ತಾಲೂಕುಗಳನ್ನು ಆಯ್ದುಕೊಳ್ಳಲಾಗಿದೆ. ಪ್ರತಿ ತಾಲೂಕಿನಿಂದ 25 ಮಹಿಳಾ ಕಾರ್ಮಿಕರಂತೆ ಒಟ್ಟು 50 ಮಹಿಳಾ ಕಾರ್ಮಿಕರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

**ಫಲಿತಾಂಶ ಮತ್ತು ಚರ್ಚೆಗಳು**

**ಕೋಷ್ಟಕ 1: ಪ್ರತಿಕ್ರಿಯಾರ್ಥಿಗಳ ವಯೋಮಾನದ ವಿವರ**

| ಕ್ರ,ಸಂ | ವಯಸ್ಸು | ಆವೃತ್ತಿ | ಶೇಕಡಾ |
|---|---|---|---|
| 01 | 10–17 | 3 | 6 |
| 02 | 18–25 | 13 | 26 |
| 03 | 26–35 | 17 | 34 |
| 04 | 36–45 | 8 | 16 |
| 05 | 46 ವರ್ಷ ಮೇಲ್ಪಟ್ಟು | 9 | 18 |
| **ಒಟ್ಟು** | | **50** | **100** |

ಕೋಷ್ಟಕ 1 ರಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಹಿಳಾ ಕಾರ್ಮಿಕರ ವಯೋಮಾನದ ವಿವರಗಳನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ ಶೇ.6 ರಷ್ಟು ಬಾಲಕಾರ್ಮಿಕರು ಕೆಲಸ ಮಾಡುವುದು ಕಂಡು ಬಂದಿದೆ ಮತ್ತು ಶೇ.34% ರಷ್ಟು 26–35 ವಯಸ್ಸಿನ ಮಳೆಯರು ಕೆಲಸ ಮಾಡುತ್ತಿದ್ದಾರೆ. ಮತ್ತು ಶೇ.18% ರಷ್ಟು 45 ವರ್ಷ ಮೇಲ್ಪಟ್ಟ ವಯಸ್ಸಿನ ಮಹಿಳೆಯರು ಕೆಲಸ ಮಾಡುವುದನ್ನು ಗಮನಿಸಬಹುದಾಗಿದೆ.

**ಕೋಷ್ಟಕ 2: ಪ್ರತಿಕ್ರಿಯಾರ್ಥಿಗಳ ಶಿಕ್ಷಣದ ವಿವರ**

| ಕ್ರ.ಸಂ | ಶಿಕ್ಷಣ | ಆವೃತ್ತಿ | ಶೇಕಡಾ |
|---|---|---|---|
| 01 | ಪ್ರಾಥಮಿಕ | 19 | 38 |
| 02 | ಪ್ರೌಢ | 9 | 18 |
| 03 | ಪದವಿ ಪೂರ್ವ | 2 | 4 |
| 04 | ಪದವಿ | – | – |
| 05 | ಸ್ನಾತಕೋತ್ತರ | 1 | 2 |
| 06 | ಅನಕ್ಷರಸ್ಥರು | 19 | 38 |
| **ಒಟ್ಟು** | | **50** | **100** |

ದ್ರಾಕ್ಷಿ ತೋಟದಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಗಮನಿಸಿದಾಗ ಶೇ.38 ರಷ್ಟು ಮಹಿಳೆಯರು ಪ್ರಾಥಮಿಕ ಶಿಕ್ಷಣವನ್ನು, ಶೇ.4 ರಷ್ಟು ಮಹಿಳೆಯರು ಪದವಿ ಪೂರ್ವ ಶಿಕ್ಷಣವನ್ನು, ಮಹಿಳೆಯೊಬ್ಬರು ಸ್ನಾತಕೋತ್ತರ ಪದವಿ ಪಡೆದಿದ್ದು (ತಂದೆಯ ಮರಣದ ನಂತರ ಮನೆಯಲ್ಲಿ ಹಿರಿಯ ಮಗಳಾಗಿದ್ದರಿಂದ ಕುಟುಂಬದ ಜವಾಬ್ದಾರಿ ಇವಳ ಮೇಲೆ ಇತ್ತು), ಶೇ.38 ರಷ್ಟು ಮಹಿಳೆಯರು ಅನಕ್ಷರಸ್ಥರಾಗಿರುವುದು ಕಂಡು ಬಂದಿದೆ. ಶಿಕ್ಷಣದಿಂದ ವಂಚಿತರಾಗಬಾರದೆಂದು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದರೂ ಕೂಡ ಅನಕ್ಷರಸ್ಥರ ಪ್ರಮಾಣ ಹೆಚ್ಚಿರುವುದನ್ನು ಈಗಲೂ ಕಾಣಬಹುದಾಗಿದೆ.

**ಕೋಷ್ಟಕ 3: ಪ್ರತಿಕ್ರಿಯಾರ್ಥಿಗಳ ಸಾಮಾಜಿಕ ಹಿನ್ನೆಲೆ**

| ಕ್ರ.ಸಂ | ಜಾತಿ | ಆವೃತ್ತಿ | ಶೇ |
|---|---|---|---|
| 01 | ಮರಾಠರು | 4 | 8 |
| 02 | ಲಿಂಗಾಯತ | 15 | 30 |
| 03 | ಕುರುಬರು | 12 | 24 |
| 04 | ಪರಿಶಿಷ್ಟ ಜಾತಿ | 15 | 30 |
| 05 | ಪರಿಶಿಷ್ಟ ಪಂಗಡ | 2 | 4 |
| 06 | ಜೈನ | 2 | 4 |
| | **ಒಟ್ಟು** | **50** | **100** |

ತೋಟದಲ್ಲಿ ಕೆಲಸ ಮಾಡುವ ಮಹಿಳೆಯರಲ್ಲಿ ಶೇ.30 ರಷ್ಟು ಲಿಂಗಾಯತ ಮತ್ತು ಅಷ್ಟೇ ಪ್ರಮಾಣದ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಶೇ.4 ರಷ್ಟು ಜೈನ ಮತ್ತು ಅಷ್ಟೇ ಪ್ರಮಾಣದ ಕಾರ್ಮಿಕರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ.

**ವೈವಾಹಿಕ ಸ್ಥಿತಿ:**

ಮಹಿಳೆಯರ ವಿವಾಹದ ನಿರ್ಧಾರವನ್ನು ತಂದೆ, ತಾಯಿಯ ಇಲ್ಲವೆ ಮನೆಯ ಹಿರಿಯರು ತಗೆದುಕೊಳ್ಳುತಾರೆ. ವಿವಾಹಿತರಲ್ಲಿ 18 ವರ್ಷಕ್ಕೂ ಕಡಿಮೆ ವಯಸ್ಸಿನ ಬಾಲಕಿಯರನ್ನು ನಾವು ನೋಡಬಹುದು. ಮಹಿಳೆಯರ ವಿವಾಹದ ವಯಸ್ಸನ್ನು ಕಾನೂನು ನಿರ್ಧರಿಸಿದ್ದರೂ ಕೂಡಾ ಇದು ಕೆಲಸ ಮಾಡುವ ಕಾರ್ಮಿಕರಿಗೆ ಮತ್ತು ವಲಸೆ ಹೋಗುವ ಜನರಿಗೆ ಅನ್ವಯ ಆಗುವುದಿಲ್ಲ ಅನ್ನುವ ರೀತಿಯಲ್ಲಿ ಮದುವೆಗಳು ಜರಗುತ್ತವೆ. ಇದಕ್ಕೆ ಕಾರಣ ಅವರ ಆರ್ಥಿಕ ಸಮಸ್ಯೆ, ಶಿಕ್ಷಣದ ಕೊರತೆ, ಹೆಣ್ಣು ಮಕ್ಕಳ ಸಂಖ್ಯೆ ಜಾಸ್ತಿ ಇರುವುದರಿಂದ ಅವರನ್ನು ಸಾಕುವುದು ಮತ್ತು ಮದುವೆ ಮಾಡಲು ಕಷ್ಟವಾಗುತ್ತದೆ ಎಂದು ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡಲಾಗುತ್ತದೆ.

**ಕೋಷ್ಟಕ 4: ಪ್ರತಿಕ್ರಿಯಾರ್ಥಿಗಳ ವೈವಾಹಿಕ ಸ್ಥಾನಮಾನ**

| ಕ್ರ.ಸಂ | ವೈವಾಹಿಕ ಸ್ಥಿತಿ | ಆವೃತ್ತಿ | ಶೇಕಡ |
|---|---|---|---|
| 01 | ವಿವಾಹಿತ | 19 | 38 |
| 02 | ಅವಿವಾಹಿತ | 5 | 10 |
| 03 | ವಿಧವೆ | 6 | 12 |
| 04 | ಪರಿತ್ಯಕ್ತರು | 10 | 20 |
| 05 | ಬಾಲ್ಯ ವಿವಾಹ | 10 | 20 |
| **ಒಟ್ಟು** | | **50** | **100** |

ತೋಟದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರಲ್ಲಿ ಶೇ.38 ಕಾರ್ಮಿಕರು ವಿವಾಹಿತರಾಗಿದ್ದಾರೆ. ಶೇ.10 ರಷ್ಟು ಅವಿವಾಹತರಾಗಿದ್ದು ಅದರಲ್ಲಿ ಬಾಲಕಾರ್ಮಿಕರನ್ನು ಕಾಣಬಹುದಾಗಿದೆ. ಶೇ.20 ರಷ್ಟು ಮಹಿಳೆಯರು ಗಂಡನಿಂದ ದೂರವಾಗಿ ತವರುಮನೆಯಲ್ಲಿ ವಾಸಿಸುತ್ತಿದ್ದಾರೆ.

**ಆರ್ಥಿಕ ಪರಿಸ್ಥಿತಿ**

**ಕೋಷ್ಟಕ 5: ಪ್ರತಿಕ್ರಿಯಾರ್ಥಿಗಳ ಮನೆಯ ಸ್ವರೂಪ**

| ಕ್ರ.ಸಂ | ಮನೆ ವಿಧ | ಆವೃತ್ತಿ | ಶೇ |
|---|---|---|---|
| 01 | ಕಚ್ಚಾಮನೆ | 2 | 4 |
| 02 | ಪತ್ರಾಸ್ | 39 | 78 |
| 03 | ಆರ್‌ಸಿಸಿ | 7 | 14 |
| 04 | ಪತ್ರಾಸ್+ಆರ್‌ಸಿಸಿ | 2 | 4 |
| **ಒಟ್ಟು** | | **50** | **100** |

ಮಹಿಳಾ ಕಾರ್ಮಿಕರು ಹೊಂದಿರುವಂತಹ ಮನೆಯನ್ನು ಗಮನಿಸಿದಾಗ ಶೇ.78 ರಷ್ಟು ಜನ ಪತ್ರಾಸ್ ಮನೆಗಳನ್ನು ಹೊಂದಿರುವುದಾಗಿ ತಿಳಿಸಿದರು. ಶೇ.4 ರಷ್ಟು ಜನ ಕಚ್ಚಾಮನೆ ಮತ್ತು ಪತ್ರಾಸ್ ಮತ್ತು ಆರ್‌ಸಿಸಿ ಮನೆಗೆಳನ್ನು ಹೊಂದಿರುವುದಾಗಿ ಹೇಳಿದರು. ಅಡುಗೆಮನೆ ಪತ್ರಾಸ್‌ದಾಗಿದ್ದು, ಪಡಸಾಲೆ ಆರ್‌ಸಿಸಿ ಆಗಿರುತ್ತದೆ.

**ಕೋಷ್ಟಕ 6: ಪ್ರತಿಕ್ರಿಯಾರ್ಥಿಗಳ ದಿನಗೂಲಿ ವಿವರ**

| ಕ್ರ.ಸಂ | ಊರು | ದಿನದ ಕೂಲಿ | ಆವೃತ್ತಿ | ಶೇಕಡಾ |
|---|---|---|---|---|
| 01 | ನಿಡೋಣಿ | 300 | 16 | 32 |
| 02 | ಬಬಲೇಶ್ವರ | 300 | 05 | 10 |
| 03 | ತಿಕೋಟಾ | 400 | 16 | 32 |
| 04 | ಬಾಬಾನಗರ | 500 | 03 | 06 |
| 05 | | 600 | 06 | 12 |
| 06 | ವಲಸೆ | 600 ಮೇಲ್ಪಟ್ಟು | 04 | 08 |
| **ಒಟ್ಟು** | | | **50** | **100** |

ಋತುಮಾನದ (ಅಕ್ಟೋಬರ್ ನಿಂದ ಮಾರ್ಚ್) ಸಮಯದಲ್ಲಿ ಕಾರ್ಮಿಕರಿಗೆ ಹೆಚ್ಚಿನ ಕೂಲಿ ನೀಡಲಾಗುತ್ತದೆ. ಕಾರಣ ಈ ಸಮಯದಲ್ಲಿ ಕೆಲಸ ಜಾಸ್ತಿಯಿರುವ ಕಾರಣ ಕೂಲಿ ನೀಡಲಾಗುತ್ತದೆ. ನಿಡೋಣಿ ಮತ್ತು ಬಬಲೇಶ್ವರದಲ್ಲಿ 300ರೂ ಕೂಲಿ ನೀಡಿದರೆ, ತಿಕೋಟಾದಲ್ಲಿ 400 ರೂ. ಬಾಬಾ ನಗರದ ಕೆಲವೊಂದು ತೋಟಗಳಲ್ಲಿ 500 ಮತ್ತು 600 ರೂಗಳನ್ನು ನೀಡಲಾಗುತ್ತದೆ, ಇನ್ನುಳಿದ ಸಂದರ್ಭಲಲ್ಲಿ 200 ರಿಂದ 250 ರೂ ಕೂಲಿ ನೀಡಲಾಗುತ್ತದೆ.

ಕೂಲಿಯ ಈ ವ್ಯತ್ಯಾಸಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದಂತೆ ತಿಳಿದು ಬಂದಿರುವುದೆನೆಂದರೆ ಸ್ಥಳೀಯ ಕಾರ್ಮಿಕರಿಗೆ ಹೆಚ್ಚಿನ ಕೂಲಿಯನ್ನೂ, ಹಾಗೂ ಹೊರ ಊರುಗಳಿಂದ ಬರುವ ಕಾರ್ಮಿಕರಿಗೆ ಮಾಲೀಕರು ವಾಹನ ಸೌಲಭ್ಯ ಕಲ್ಪಿಸುವುದ್ದರಿಂದ ಕಡಿಮೆ ಕೂಲಿಯನ್ನು ನೀಡುತ್ತಾರೆ.

**ಕೋಷ್ಟಕ 7: ಪ್ರತಿಕ್ರಿಯಾರ್ಥಿಗಳ ಕೂಲಿಯ ಸ್ವರೂಪ**

| ಕ್ರ.ಸಂ | ದಿನ | ಆವೃತ್ತಿ | ಶೇಕಡಾ |
|---|---|---|---|
| 01 | ವಾರಕ್ಕೊಮ್ಮೆ | 40 | 80 |
| 02 | 15 ದಿನಗಳಿಗೊಮ್ಮೆ | 6 | 12 |
| 03 | ತಿಂಗಳಿಗೊಮ್ಮೆ | – | – |
| 04 | ಪೂರ್ತಿ ಕೆಲಸ ಮುಗಿದಮೇಲೆ | 4 | 8 |
| **ಒಟ್ಟು** | | **50** | **100** |

ತೋಟದಲ್ಲಿ ಕೆಲಸ ಮಾಡುವ ಮಹಿಳೆಯರಲ್ಲಿ ಶೇ.80 ರಷ್ಟು ಜನ ಕೂಲಿಯನ್ನು ವಾರಕ್ಕೊಮ್ಮೆ ಪಡೆದರೆ, ಶೇ.8 ರಷ್ಟು ಜನ ಪೂರ್ತಿ ಕೆಲಸ ಮುಗಿದ ಮೇಲೆಯೇ ಕೂಲಿ ಹಣವನ್ನು ಪಡೆದುಕೊಳ್ಳುತ್ತಾರೆ.

**ಕೋಷ್ಟಕ 8: ಪ್ರತಿಕ್ರಿಯಾರ್ಥಿಗಳ ಹಣ ಉಳಿತಾಯ ಪ್ರವೃತ್ತಿ**

| ಕ್ರ.ಸಂ | ಕೂಲಿ ಉಳಿತಾಯ | ಸಂಖ್ಯೆ | ಶೇಕಡಾ |
|---|---|---|---|
| 01 | ಪಿಗ್ಮಿ | 1 | 2 |
| 02 | ಬ್ಯಾಂಕು | 1 | 2 |
| 03 | ಬಿಸಿ | – | – |
| 04 | ಎಸ್‌ಎಚ್‌ಜಿ | 15 | 30 |
| 05 | ಇತರೆ | 5 | 10 |
| 06 | ಇಲ್ಲ | 28 | 56 |
| **ಒಟ್ಟು** | | **50** | **100** |

ಮಹಿಳಾ ಕಾರ್ಮಿಕರಲ್ಲಿ ಶೇ.56 ರಷ್ಟು ಜನ ತಮ್ಮ ಕೂಲಿ ಹಣದಲ್ಲಿ ಉಳಿತಾಯ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಶೇ.30 ರಷ್ಟು ಜನರು ಎಸ್‌ಎಚ್‌ಜಿ (ಮಹಿಳಾ ಸ್ವ–ಸಹಾಯ ಮತ್ತು ಧರ್ಮಸ್ಥಳ ಸಂಘ) ಯಲ್ಲಿ ಹಣ ಉಳಿತಾಯ ಮಾಡುವುದಾಗಿ ಹೇಳಿದರು.

**ಕೋಷ್ಠಕ 9: ಪ್ರತಿಕ್ರಿಯಾರ್ಥಿಗಳ ಕುಟುಂಬದಲ್ಲಿ ಸಾಲದ ವಿವರ**

| ಕ್ರ.ಸಂ | ಸಾಲದ ವಿಧ | ಸಂಖ್ಯೆ | ಶೇ |
|---|---|---|---|
| 01 | ಮಕ್ಕಳ ಶಿಕ್ಷಣ | 4 | 8 |
| 02 | ಮಕ್ಕಳ ವಿವಾಹ | 3 | 6 |
| 03 | ಕುಟುಂಬದ ನಿರ್ವಹಣೆ | 4 | 8 |
| 04 | ಆರೋಗ್ಯದ ಸಮಸ್ಯೆ | – | – |
| 05 | ಇತರೆ | 18 | 36 |
| 06 | ಸಾಲ ಇಲ್ಲ | 19 | 38 |
| 07 | ಸಾಲದ ಬಗ್ಗೆ ಗೊತ್ತಿಲ್ಲ | 2 | 4 |
| **ಒಟ್ಟು** | | **50** | **100** |

ತೋಟದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ ಸಾಲದ ಬಗ್ಗೆ ವಿಚಾರಿಸಿದಾಗ ಶೇ.38 ರಷ್ಟು ಜನ ಯಾವುದೇ ಸಾಲ ಮಾಡಿಲ್ಲ ಏಕೆಂದರೆ ದುಡಿದು ಬಂದ ಕೂಲಿ ಆ ದಿನದ ಊಟಕ್ಕೆ ಸರಿಹೋಗುತ್ತೆದೆ. ಸಾಲ ಮಾಡಿದರೆ ಸಾಲ ತೀರಿಸಲು ಕಷ್ಟ ಮತ್ತು ಸಾಲಗಾರರ ಕಾಟ ತಡೆಯಲು ಆಗುವುದಿಲ್ಲ ಎಂದು ಹೇಳಿದರು. ಶೇ.4 ರಷ್ಟು ಜನರಿಗೆ ಮನೆಯಲ್ಲಿ ಸಾಲ ಮಾಡಿರುವ ಬಗ್ಗೆ ಮಾಹಿತಿಯೇ ಇಲ್ಲ ಎಂದು ಹೇಳಿದರು. ಶೇ.38 ರಷ್ಟು ಮಹಿಳೆಯರು ಇತರೆ ಕಾರಣಗಳಿಗೆ ಸಾಲ ಮಾಡಿದ್ದಾಗಿ ಹೇಳಿದ್ದು, ಹೊಲದ ನಿರ್ವಹಣೆಗಾಗಿ, ಮಷಿನ್‌ಗಳ ಖರೀದಿಗಾಗಿ ಸಾಲ ಮಾಡಿರುವುದಾಗಿ ಹೇಳಿದ್ದಾರೆ.

**ದುಡಿಮೆಯ ಸ್ವರೂಪ**

ದ್ರಾಕ್ಷಿ ತೋಟಗಳಲ್ಲಿ ಮಹಿಳಾ ಕಾರ್ಮಿಕರೇ ಹೆಚ್ಚು ದುಡಿಯುತ್ತಿದ್ದಾರೆ.3 ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಾರೆ, ಬೆಳಗ್ಗೆ 8 ರಿಂದ ಸಾಯಂಕಾಲ 6 ಗಂಟೆಯವರೆಗೆ, ಬೆಳಗ್ಗೆ 9 ರಿಂದ ಮಧ್ಯಾಹ್ನ 2ರವರೆಗೆ ಮತ್ತು ಮಧ್ಯಾಹ್ನ 2 ರಿಂದ ಸಾಯಂಕಾಲ 6 ರ ವರೆಗೆ ಕೆಲಸ ಮಾಡುತ್ತಾರೆ. ಸಿಜನ್ ಸಮಯದಲ್ಲಿ ವಲಸೆಗಾರರ ಸಂಖ್ಯೆಯು ಹೆಚ್ಚಿರುತ್ತದೆ. ಬೇರೆ ರಾಜ್ಯಗಳಿಂದ ಕೆಲಸಕ್ಕೆ ಬರುತ್ತಾರೆ. ಹೀಗೆ ಬಂದತಂಹ ಕಾರ್ಮಿಕರಿಗೆ ದಿನದ ಕೂಲಿಯನ್ನು ಕೊಡದೆ ಅವರಿಗೆ ಗಿಡಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗುತ್ತದೆ. ಒಂದು ಗಿಡಕ್ಕೆ 11 ರಿಂದ 13 ರೂಪಾಯಿಂತೆ ನೀಡಲಾಗುತ್ತದೆ. ಅವರು ಕಿಲಸ್ ತೆಗೆಯುವುದು, ಚಾಟಣಿ ಮಾಡುವುದು, ಕಡ್ಡಿಗಳಿಗೆ ಬಣ್ಣ ಹಚ್ಚುವುದನ್ನು ಮಡುತ್ತಾರೆ. ಕೆಲಸ ಮುಗಿದ ನಂತರವೇ ಅವರಿಗೆ ಪೂರ್ತಿ ಹಣವನ್ನು ನೀಡಲಾಗುತ್ತದೆ. ಬಣ್ಣ ಹಚ್ಚಲು, ಕಸ ತಗೆಯಲು, ಚಾಟಣಿ ಮಾಡಲು ದಿನದ ಕೂಲಿ ಮಾಡುವವರು 250 ರಿಂದ 500 ಹಣವನ್ನು ಪಡೆದರೆ, ವಲಸೆ ಬಂದಿರುವವರು ಒಂದು ಗಿಡಕ್ಕೆ 11 ರಿಂದ 13 ರೂಗಳನ್ನು ಪಡೆಯುತ್ತಾರೆ. ವಲಸಿಗರು 20 ಗಿಡಗಳನ್ನು ದಿನದಲ್ಲಿ ಪೂರ್ಣಗೂಳಿಸಿದರೆ 240 ರೂ ಗಳನ್ನು ಪಡೆದುಕೊಳ್ಳುತ್ತಾರೆ. ಕಿಡಿಮೆ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳ ಕೆಲಸ ಮಾಡಿ ಹೆಚ್ಚು ಕೂಲಿ ಪಡೆಯುವುದಕ್ಕಾಗಿ ಸಣ್ಣ ಮಕ್ಕಳನ್ನು ಕೆಲಸಕ್ಕೆ ಉಪಯೋಗಿಸುತ್ತಾರೆ. ಈ ಸಮಯದಲ್ಲಿ ಅವರಿಗೆ ಆರೋಗ್ಯದಲ್ಲಿ ಏರುಪೇರುಗಳಾದರೂ ಕೂಡ ಮಾಲೀಕರು ಜವಾಬ್ದಾರಿಗಳನ್ನು ತಗೆದುಕೊಳ್ಳವುದಿಲ್ಲ. ಹೀಗೆ ವಲಸೆ ಬರುವಾಗ ಅವರ ಮಕ್ಕಳನ್ನು ಕರೆದುಕೊಂಡು ಬರುತ್ತಾರೆ ಅವರು ಕೂಡ ಇವರಿಗೆ ಕೆಲಸ ಮಾಡುವಾಗ ಸಹಾಯ ಮಾಡುತ್ತಾರೆ ಇದರಿಂದ ಅವರ ಮಕ್ಕಳ ಶಿಕ್ಷಣವು ಕುಂಠಿತಗೊಳ್ಳುತ್ತದೆ.

ದ್ರಾಕ್ಷಿ ತೋಟಗಳಲ್ಲಿ ಮಹಿಳೆಯರು ನಿರಂತರವಾಗಿ ವರ್ಷವಿಡಿ ಕೆಲಸ ಮಾಡುತ್ತಾರೆ ಸಿಜನ್ ಸಮಯದಲ್ಲಿ ಅಂದರೆ ಅಕ್ಟೋಬರ್‌ನಿಂದ ಮಾರ್ಚ್ ತಿಂಗಳಲ್ಲಿ ದ್ರಾಕ್ಷಿ ಹಣ್ಣುಗಳನ್ನು ಕೀಳುತ್ತಾರೆ. ಆಗ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಾರೆ. ಉಳಿದ ತಿಂಗಳುಗಳಲ್ಲಿ ತೋಟಗಳಲ್ಲಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆ ಕಡಿಮೆಯಾಗಿರುತ್ತದೆ.

**ಕೋಷ್ಠಕ 10: ಪ್ರತಿಕ್ರಿಯಾರ್ಥಿಗಳ ಕೆಲಸದ ಸಮಯ**

| ಕ್ರ.ಸಂ | ಸಮಯ | ಸಂಖ್ಯೆ | ಶೇಕಡಾ |
|---|---|---|---|
| 01 | ಬೆಳಗ್ಗೆ 8 ರಿಂದ ಸಂಜೆ 6 | 35 | 70 |
| 02 | ಬೆಳಗ್ಗೆ 10 ರಿಂದ ಸಂಜೆ 6 | 6 | 12 |
| 03 | ಬೆಳಗ್ಗೆ 6 ರಿಂದ ಮದ್ಯಾಹ್ನ 2 | 5 | 10 |
| 04 | ಮದ್ಯಾಹ್ನ 2 ರಿಂದ ಸಂಜೆ 6 | 4 | 8 |
| **ಒಟ್ಟು** | | **50** | **100** |

ಮಹಿಳಾ ಕೃಷಿ ಕಾರ್ಮಿಕರಲ್ಲಿ ಅತ್ಯಂತ ಹೆಚ್ಚು (ಶೇ.70) ಕಾರ್ಮಿಕರು ಬೆಳಿಗ್ಗೆ 8 ರಿಂದ ಸಂಜೆ 6 ವರೆಗೆ ದುಡಿಯುತ್ತಾರೆ. ಇವರು ಕೆಲಸ ಮಾಡುವ ಸಮಯದ ಆಧಾರದ ಮೇಲೆ ಇವರಿಗೆ ನೀಡುವ ಕೂಲಿಯು ಅವಲಂಬಿತವಾಗಿರುತ್ತದೆ.

**ಕೋಷ್ಠಕ 11: ಕಾರ್ಮಿಕರಾಗಿ ದುಡಿಯುತ್ತಿರುವ ವರ್ಷಗಳು**

| ಕ್ರ.ಸಂ | ಅವಧಿ | ಸಂಖ್ಯೆ | ಶೇಕಡಾ |
|---|---|---|---|
| 01 | 1 ವರ್ಷದೊಳಗೆ | 4 | 8 |
| 02 | 1–5 ವರ್ಷ | 11 | 22 |
| 03 | 6– 10 ವರ್ಷ | 10 | 20 |
| 04 | 11– 15 ವರ್ಷ | 4 | 8 |
| 05 | 16 ವರ್ಷ ಮೇಲ್ಪಟ್ಟು | 21 | 42 |
| **ಒಟ್ಟು** | | **50** | **100** |

ಅತ್ಯಂತ ಹೆಚ್ಚು ಮಹಿಳಾ ಕಾರ್ಮಿಕರು (ಶೇ.422) 16 ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ದ್ರಾಕ್ಷಿ ತೋಟಗಳಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿದ್ದಾರೆ. ಇನ್ನುಳಿದಂತೆ ಶೇ.22 ರಷ್ಟು ಕಾರ್ಮಿಕರು 5 ವರ್ಷಗಳಿಂದ ಕೂಲಿ ಮಾಡುತ್ತಿದ್ದಾರೆ.

**ಕೋಷ್ಠಕ 12: ಕೆಲಸದ ಸಮಯದಲ್ಲಿ ಮಾಲೀಕರ ವರ್ತನೆ**

| ಕ್ರ.ಸಂ | ವರ್ತನೆ | ಸಂಖ್ಯೆ | ಶೇಕಡಾ |
|---|---|---|---|
| 01 | ಬಯ್ಯುವುದು | 23 | 46 |
| 02 | ಅಪಹಾಸ್ಯ | – | – |
| 03 | ಇಲ್ಲ | 27 | 54 |
| **ಒಟ್ಟು** | | **50** | **100** |

ಮಹಿಳಾ ಕಾರ್ಮಿಕರ ಜೊತೆ ಮಾಲೀಕರ ವರ್ತನೆಯನ್ನು ಗಮನಿಸಿದಾಗ ಸುಮಾರು 46% ರಷ್ಟು ಕಾರ್ಮಿಕರು, ಮಾಲೀಕರು ಬಯ್ಯುವುದಾಗಿ ಹೇಳಿದರೆ, ಇನ್ನೂ 54% ರಷ್ಟು ಜನ ಬಯ್ಯುವುದಾಗಲಿ, ಅಪಹಾಸ್ಯ ಮಾಡುವುದಾಗಲಿ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಮಾಲೀಕರು ಅಸಹ್ಯ ಮಾತುಗಳಿಂದ ನಿಂದಿಸಿದರು ಕೂಡ ಮತ್ತು ಅಂತಹ ಶಬ್ಧಗಳನ್ನು ಪ್ರತಿ ದಿನ ಕೇಳುವುದರಿಂದ ಅವರಿಗೆ ಅವು ಬೈಗುಳ ಅನ್ನಿಸುವುದಿಲ್ಲ.

**ಆರೋಗ್ಯ ಸ್ಥಿತಿ**

**ಕೋಷ್ಠಕ 13: ದ್ರಾಕ್ಷಿ ಕಡ್ಡಿಗಳಿಗೆ ಬಣ್ಣ ಹಚ್ಚುವಾಗ/ ರಸಗೋಬ್ಬರ ಸಿಂಪಡಿಸುವಾಗ ಧರಿಸುವ ವಸ್ತುಗಳು**

| ಕ್ರ.ಸಂ | ಧರಿಸು | ಸಂಖ್ಯೆ | ಶೇಕಡಾ |
|---|---|---|---|
| 01 | ಗ್ಲೌಸ್ | 2 | 4 |
| 02 | ಗ್ಲೌಸ್ + ಏಪ್ರಾನ್ + ಮಾಸ್ಕ್ | 12 | 24 |
| 03 | ಗ್ಲೌಸ್ + ಏಪ್ರಾನ್ + ಮಾಸ್ಕ್ + ಕಾಲಿಗೆ ಬೂಟು | 2 | 4 |
| 04 | ಏನೂ ಧರಿಸದೇ ಇರುವವರು | 34 | 68 |
| **ಒಟ್ಟು** | | **50** | **100** |

ಪ್ರತಿ ದಿನ ಮೂರು ಬಾರಿ ಗಿಡಗಳಿಗೆ ರಸಗೊಬ್ಬರವನ್ನು ಸಿಂಪಡಿಸಬೇಕು. ಕಡ್ಡಿಗಳಿಗೆ ಬಣ್ಣ ಹಚ್ಚಬೇಕು. ಬಣ್ಣ ಹಚ್ಚುವಾಗ ಕೈಗಳಿಗೆ ಗ್ಲೌಸ್ ಹಾಕುತ್ತಾರೆ. ಮಹಿಳೆಯರು ಬಣ್ಣ ಹಚ್ಚುವಾಗ ಉಗುರುಗಳಲ್ಲಿ ಬಣ್ಣ ಸೇರಿಕೊಳ್ಳುತ್ತದೆ ಹೀಗಾಗಿ ಮಹಿಳೆಯರು ಆ ಸಮಯದಲ್ಲಿ ಅಡುಗೆ ಮಾಡಲು ಹಿಂಜರಿಯುತ್ತಾರೆ. ಬಣ್ಣ ಮನೆಯವರ ಹೊಟ್ಟೆಗೆ ಸೇರಿಕೊಂಡರೆ ಅನ್ನುವ ಭಯ ಅವರನ್ನು ಕಾಡುತ್ತದೆ. ಕೆಲಸದ ಸಮಯದಲ್ಲಿ ಕೆಲಸಗಾರರಿಗೆ ತೊಂದರೆಗಳಾದರೆ ಆಸ್ಪತ್ರೆ ಖರ್ಚುಗಳನ್ನು ಮತ್ತು ಜವಾಬ್ದಾರಿಗಳನ್ನು ತೋಟದ ಮಾಲೀಕರು ತಗೆದುಕೊಳ್ಳುವುದಿಲ್ಲ. ತೋಟಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು ಬಣ್ಣ ಹಚ್ಚುವಾಗ ಶೇ.4 ರಷ್ಟು

ಜನರು ಕೈಗಳಿಗೆ ಗ್ಲೌಸ್‌ಗಳನ್ನು ಧರಿಸುತ್ತಾರೆ. ಶೇ.24 ಜನ ಗ್ಲೌಸ್, ಏಪ್ರಾನ್ ಮತ್ತು ಮಾಸ್ಕ್‌ಗಳನ್ನು ಧರಿಸುತ್ತಾರೆ. ಗ್ಲೌಸ್‌ಗಳನ್ನು ತೋಟದ ಮಾಲೀಕರು ನೀಡುತ್ತಾರೆ. ಏಪ್ರಾನ್‌ಗಳ ಬದಲಿಗೆ ಮನೆಯ ಗಂಡಸರ ಶರ್ಟ್‌ಗಳನ್ನು ಮತ್ತು ಮಾಸ್ಕ್‌ಗಳ ಬದಲಾಗಿ ದುಪ್ಪಟ್ಟಾಗಳನ್ನು ಮಹಿಳೆಯರು ಧರಿಸುತ್ತಾರೆ. ಶೇ.68 ಜನ ಮೊದಲು ಗಿಡಗಳಿಗೆ ಬಣ್ಣ ಹಚ್ಚುತ್ತಿದ್ದು ಅದರಿಂದ ಅಲರ್ಜಿಗಳಾಗಿದ್ದು, ಆರೋಗ್ಯದಲ್ಲಿ ಸಮಸ್ಯಗಳಾಗಿದ್ದರಿಂದ ಈಗ ಬಣ್ಣವನ್ನು ಹಚ್ಚುತ್ತಿಲ್ಲಾ ಎಂದು ಹೇಳಿದರು.ಅದರಲ್ಲಿ ಕೆಲವು ಜನ ಕೆಲಸಕ್ಕೆ ಸೇರಿ ಕಡಿಮೆ ದಿನಗಳಾಗಿದ್ದರಿಂದ ಬಣ್ಣವನ್ನು ಹೇಗೆ ಹಚ್ಚಬೇಕು ಎನ್ನುವ ಮಾಹಿತಿ ಇಲ್ಲವಾದರಿಂದ ಬಣ್ಣ ಹಚ್ಚುತ್ತಿಲ್ಲಾ ಎಂದು ತಿಳಿಸಿದರು.

**ಕೋಷ್ಟಕ 14: ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳು**

| ಕ್ರ.ಸಂ | ಆರೋಗ್ಯ ಸಮಸ್ಯೆಗಳು | ಆವೃತ್ತಿ | ಶೇಕಡ |
|---|---|---|---|
| 01 | ರಕ್ತದ ಒತ್ತಡ | 1 | 2 |
| 02 | ಸಕ್ಕರೆ ಕಾಯಿಲೆ | 1 | 2 |
| 03 | ಮೈಕೈ ನೋವು | 38 | 76 |
| 04 | ಗರ್ಭಕೋಶದ ತೊಂದರೆ | 3 | 6 |
| 05 | ಇತರೆ | 7 | 14 |
| **ಒಟ್ಟು** | | **50** | **100** |

ಮಹಿಳೆಯರು ತೋಟದಲ್ಲಿ ಹೆಚ್ಚಾಗಿ ನಿಂತು ಕೆಲಸ ಮಾಡುತ್ತಾರೆ. ಇದರಿಂದಾಗಿ ಅವರಿಗೆ ಹೆಚ್ಚಾಗಿ ಮೈಕೈ ನೋವು, ಕಾಲು ನೋವು, ಸೊಂಟ ನೋವು ಕಂಡುಬರುತ್ತದೆ. ಶೇ.76 ರಷ್ಟು ಜನರು ಮೈಕೈ ನೋವು ಇದೆ ಎಂದು ಹೇಳಿದ್ದಾರೆ.ಶೇ.6 ರಷ್ಟು ಜನ ಗರ್ಭಕೋಶದ ತೊಂದರೆಯಿದೆ ಎಂದು ಹೇಳಿದ್ದಾರೆ. ಇನ್ನೂ ಕೆಲವರು ಬಿಳಿಮುಟ್ಟು ಸಮಸ್ಯೆಯಿದೆ ಎಂದು ಹೇಳಿದ್ದಾರೆ.

ಸರ್ಕಾರವು ಗರ್ಭಿಣಿಯರಿಗಾಗಿ ಪೌಷ್ಠಿಕಾಂಶ ಆಹಾರದ ಜೊತೆಗೆ ಹಣವನ್ನು ನೀಡುತ್ತಿದೆ.

**ಕೋಷ್ಟಕ 15: ಗರ್ಭಿಣಿಯರಿಗಾಗಿ ಇರುವ ಸೌಲಭ್ಯಗಳು**

| ಕ್ರ.ಸಂ | ಸೌಲಭ್ಯಗಳು | ಆವೃತ್ತಿ | ಶೇಕಡ |
|---|---|---|---|
| 01 | ತಾಯಿ ಕಾರ್ಡ್ ಹೊಂದಿದ್ದು ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ | 17 | 34 |
| 02 | ತಾಯಿ ಕಾರ್ಡ್ ಹೊಂದಿದ್ದು ಸೌಲಭ್ಯಗಳನ್ನು ಪಡೆದುಕೊಂಡಿಲ್ಲ | 7 | 14 |
| 03 | ತಾಯಿ ಕಾರ್ಡ್ ಕಾರ್ಡ್ ಹೊಂದಿಲ್ಲದಿರುವುದು. | 26 | 52 |
| **ಒಟ್ಟು** | | **50** | **100** |

ತಾಯಿ ಕಾರ್ಡ್ ಹೊಂದಿರುವವರಲ್ಲಿ ಶೇ.24 ಕಾರ್ಮಿಕರು ಮತ್ತು ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಶೇ.14 ಕಾರ್ಮಿಕರು ತಾಯಿ ಕಾರ್ಡ್ ಇದ್ದರೂ ಕೂಡ ಈ ಸೌಲಭ್ಯಗಳನ್ನು ಪಡೆದುಕೊಂಡಿಲ್ಲ. ಏಕೆಂದರೆ ಕಾರ್ಮಿಕರು ತೋಟಗಳಲ್ಲಿ ವಾಸಿಸುತ್ತಿರುವುದು ಮತ್ತು ಅಲ್ಲಿ ಕೆಲಸ ಮಡುತ್ತಿರುವುದರಿಂದ ಸೌಲಭ್ಯಗಳನ್ನು ಪಡೆದುಕೊಳ್ಳಲು ಊರಿನಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಬರಲು ಸಮಯವಿಲ್ಲವೆಂದು ಮತ್ತು ಬಂದರೆ ಒಂದು ದಿನದ ಕೂಲಿಯನ್ನು ಕಳೆದುಕೊಳ್ಳಬೇಕಾಗುತ್ತದೆ ಆದ್ದರಿಂದ ಸೌಲಭ್ಯಗಳನ್ನು ಪಡೆದುಕೊಂಡಿಲ್ಲ.

**ಸರ್ಕಾರದ ಸೌಲಭ್ಯಗಳು**

ಸಮಾಜದಲ್ಲಿ ಹಿಂದುಳಿದವರು, ಮಹಿಳೆಯರು, ಗ್ರಾಮೀಣ ಪ್ರದೇಶದ ಜನರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಜಾತಿಗೊಳಿಸಿದೆ. ಅಧ್ಯಯನಕ್ಕೊಳಪಡಿಸಿರುವ ಕಾರ್ಮಿಕರಲ್ಲಿ ಆಧಾರ ಕಾರ್ಡ್, ರೇಷನ ಕಾರ್ಡ್ ಮತ್ತು ವೋಟರ್ ಕಾರ್ಡ್ ಹೊಂದಿದ್ದಾರೆ. ಆದರೂ ಕೂಡ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ.

**ಕೋಷ್ಟಕ 16: ಕಾರ್ಮಿಕ ಕಾರ್ಡ್‌ಗಳನ್ನು ಹೊಂದಿರುವವರ ವಿವರ**

| ಕ್ರ.ಸಂ | ಕಾರ್ಮಿಕರ ಕಾರ್ಡ | ಆವೃತ್ತಿ | ಶೇಕಡ |
|---|---|---|---|
| 01 | ಹೌದು | 13 | 26 |
| 02 | ಇಲ್ಲ | 37 | 74 |
| **ಒಟ್ಟು** | | **50** | **100** |

ಒಟ್ಟು ಮಹಿಳಾ ಕಾರ್ಮಿಕರಲ್ಲಿ ಶೇ.26 ರಷ್ಟು ಕಾರ್ಮಿಕರು ಮತ್ತು ಕಾರ್ಮಿಕ ಕಾರ್ಡ್‌ಗಳನ್ನು ಹೊಂದಿದ್ದಾರೆ. ಸಾಮಾನ್ಯವಾಗಿ ಕಾರ್ಮಿಕ ಕಾರ್ಡ್‌ಗಳನ್ನು ಕಟ್ಟಡ ಕಾರ್ಮಿಕರಿಗೆ ನೀಡಲಾಗುತ್ತದೆ. ತೋಟದ ಕಾರ್ಮಿಕರಲ್ಲಿ ತೋಟದ ಕೆಲಸ ಸಿಗದ ಸಂದರ್ಭದಲ್ಲಿ ಗಾರೆ ಕೆಲಸಕ್ಕೆ ಹೋಗುತ್ತಾರೆ.

**ಕೋಷ್ಟಕ 17: ಸರ್ಕಾರದ ಯೋಜನೆಗಳನ್ನು ಪಡೆದುಕೊಂಡಿರುವವರ ವಿವರ**

| ಕ್ರ.ಸಂ | ಯೋಜನೆಗಳು | ಆವೃತ್ತಿ | ಶೇಕಡ |
|---|---|---|---|
| 01 | ಇಂದಿರಾ ಆವಾಸ್ ಆಶ್ರಯ ಮನೆ + ಶೌಚಾಲಯ | 10 | 20 |
| 02 | ಇಂದಿರಾ ಆವಾಸ್ ಆಶ್ರಯ ಮನೆ | 3 | 6 |
| 03 | ಶೌಚಾಲಯ | 21 | 42 |
| 04 | ಯಾವುದು ಇಲ್ಲ | 16 | 32 |
| **ಒಟ್ಟು** | | **50** | **100** |

ಸರ್ಕಾರದ ಯೋಜನೆಗಳಾದ ಇಂದಿರಾ ಆಶ್ರಯ ಮನೆ ಮತ್ತು ಸ್ವಚ್ಛಭಾರತದ ಯೋಜನೆಯಡಿಯಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗುತ್ತದೆ. ಈ ಎರಡೂ ಸೌಲಭ್ಯಗಳನ್ನು ಶೇ.20 ಮಹಿಳಾ ಕಾರ್ಮಿಕರು ಪಡೆದುಕೊಂಡಿದ್ದಾರೆ. ಶೇ.6 ರಷ್ಟು ಕಾರ್ಮಿಕರು ಕೇವಲ ಇಂದಿರಾ ಆವಾಸ್ ಆಶ್ರಯ ಮನೆಗಳನ್ನು ಪಡೆದುಕೊಂಡಿದ್ದರೆ, ಶೇ.42 ರಷ್ಟು ಕಾರ್ಮಿಕರು ಕೇವಲ ಶೌಚಾಲಯ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ.

**ಕೋಷ್ಟಕ 18: ಸಾಮಾಜಿಕ ಭದ್ರತೆ ಯೋಜನೆಗಳನ್ನು ಪಡೆದುಕೊಂಡಿರುವವರ ವಿವರ**

| ಕ್ರ.ಸಂ | ಸೌಲಭ್ಯಗಳು | ಆವೃತ್ತಿ | ಶೇಕಡ |
|---|---|---|---|
| 01 | ವಿಧವಾ ವೇತನ | 5 | 10 |
| 02 | ವೃದ್ಧಾಪ್ಯ ವೇತನ | 1 | 2 |
| 03 | ಅಂಗವಿಕಲ ಪಾಸ್ | – | – |
| 04 | ಹಿರಿಯರ ಬಸ್ ಪಾಸ್ | – | – |
| 05 | ಕಾರ್ಮಿಕರ ಬಸ್ ಪಾಸ್ | – | – |
| 06 | ಯಾವುದೇ ಸೌಲಭ್ಯ ಪಡಿಯದೆ ಇರುವವರು | 44 | 88 |
| **ಒಟ್ಟು** | | **50** | **100** |

ಕೋಷ್ಟಕವನ್ನು ಗಮನಿಸಿದಾಗ ಶೇ.10 ರಷ್ಟು ಜನ ವಿಧವಾ ವೇತನ ಪಡೆಯುತ್ತಿರುವುದನ್ನು ಕಾಣಬಹುದಾಗಿದೆ. ಶೇ.88 ರಷ್ಟು ಕಾರ್ಮಿಕರು ಯಾವುದೇ ಸೌಲಭ್ಯಗಳನ್ನು ಪಡೆದಿರುವುದಿಲ್ಲ. ಬಹುತೇಕ ಕಾರ್ಮಿಕರಿಗೆ ಸರ್ಕಾರದಿಂದ ನೀಡುವ ಸೌಲಭ್ಯಗಳ ಬಗ್ಗೆ ಅರಿವಿಲ್ಲ. ಹಾಗೂ ಅರಿವಿದ್ದರೂ ಅವುಗಳನ್ನು ಹೇಗೆ ಪಡೆದುಕೊಳ್ಳಬೇಕು ಎಂಬುದರ ಬಗ್ಗೆ ತಿಳಿವಳಿಕೆ ಇಲ್ಲದಿರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

**ಫಲಿತಗಳು**

- ದ್ರಾಕ್ಷಿ ತೋಟದ ಕೆಲಸಗಳಲ್ಲಿ ಪುರುಷ ಕಾರ್ಮಿಕರಿಗಿಂತ ಮಹಿಳಾ ಕಾರ್ಮಿಕರ ಸಂಖ್ಯೆ ಅಧಿಕವಾಗಿದೆ.
- ದ್ರಾಕ್ಷಿ ತೋಟದಲ್ಲಿ 26–35 ವಯೋಮಿತಿಯ ಮಹಿಳಾ ಕಾರ್ಮಿಕರು ಹೆಚ್ಚಿನ ಪ್ರಮಾಣದಲ್ಲಿ ದುಡಿಯುತ್ತಿದ್ದಾರೆ.
- ಮಹಿಳಾ ಕಾರ್ಮಿಕರಿಗೆ 400 ರೂ ಕೂಲಿ ನೀಡಿದರೆ ಪುರುಷ ಕಾರ್ಮಿಕರಿಗೆ 500 ರಿಂದ 600 ರೂಗಳನ್ನು ನೀಡುವ ಮೂಲಕ ಕೂಲಿಯಲ್ಲಿ ತಾರತಮ್ಯ ಮಾಡಲಾಗುತ್ತಿದೆ.
- ಮಹಿಳೆಯರು ಮನೆಯ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಮತ್ತು ಮನೆಯ

ಜವಾಬ್ದಾರಿಯನ್ನು ನಿಭಾಯಿಸಲು ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

- ಅಕ್ಟೋಬರ್ ತಿಂಗಳಿನಿಂದ ಮಾರ್ಚ್ ತಿಂಗಳವರೆಗೆ ದ್ರಾಕ್ಷಿ ತೋಟದಲ್ಲಿ ಕೂಲಿ ಹಣ ಜಾಸ್ತಿ ಸಿಗುವುದರಿಂದ ತಮ್ಮ ಆರೋಗ್ಯದಲ್ಲಿ ಏರುಪೇರಾದರೂ ತೋಟದ ಕೆಲಸಕ್ಕೆ ಬರುವುದನ್ನು ತಪ್ಪಿಸುವುದಿಲ್ಲ.
- ತೋಟಗಳಲ್ಲಿ ಕೆಲಸ ಮಾಡುವಾಗ ಕಾರ್ಮಿಕರಿಗೆ ತೊಂದರೆಗಳಾದರೆ ಮಾಲೀಕರು ಯಾವುದೇ ಜವಾಬ್ದಾರಿಗಳನ್ನು ತೆಗೆದುಕೊಳುವುದಿಲ್ಲ.
- ದ್ರಾಕ್ಷಿ ಕಡ್ಡಿಗಳಿಗೆ ಬಣ್ಣ ಹಚ್ಚುವುದಕ್ಕೆ ಕುಟುಂಬ ಸಮೇತ ಮಹಿಳೆಯರು ವಲಸೆ ಬರುವುದರಿಂದ ಮಕ್ಕಳ ಶಿಕ್ಷಣ ಕುಂಠಿತವಾಗಿದೆ.
- ದ್ರಾಕ್ಷಿ ತೋಟಕ್ಕೆ ಹತ್ತಿರವಿರುವ ಹಾಗೂ ದೂರದ ಊರಿನಿಂದ ಬರುವ ಕಾರ್ಮಿಕರಿಗೆ ನೀಡುವ ಕೂಲಿಯಲ್ಲಿ ವ್ಯತ್ಯಾಸವಿರುತ್ತದೆ.
- ಕಾರ್ಮಿಕರಿಗಿರುವ ಸವಲತ್ತುಗಳು ಸರಿಯಾಗಿ ಸಿಗುತ್ತಿಲ್ಲ ಮತ್ತು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಬಗ್ಗೆ ಕಾರ್ಮಿಕರಿಗೆ ಹೆಚ್ಚಿನ ಅರಿವಿಲ್ಲ.

**ಉಪಸಂಹಾರ**

ಒಟ್ಟಾರೆಯಾಗಿ ದ್ರಾಕ್ಷಿ ತೋಟಗಳಲ್ಲಿ ಕೆಲಸ ನಿರ್ವಹಿಸುವ ಮಹಿಳಾ ಕಾರ್ಮಿಕರು ಮೂಲತಃ ಬಡತನ ರೇಖೆಗಿಂತ ಕೆಳಗಿನವರಾಗಿದ್ದಾರೆ. ಇವರು ಕೂಲಿ ತಾರತಮ್ಯದ ಜೊತೆಗೆ ಹಲವಾರು ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಕಾರ್ಮಿಕರ ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಬಗ್ಗೆ ಇವರಿಗೆ ಅರಿವಿಲ್ಲ. ಇವರಲ್ಲಿ ಅನಕ್ಷರತೆ ಪ್ರಮಾಣ ಅಧಿಕವಾಗಿದೆ. ಹೀಗಾಗಿ ಸರ್ಕಾರ ಮಹಿಳಾ ಕಾರ್ಮಿಕರ ಅಭಿವೃದ್ಧಿಗೆ ಕ್ರಮಕೈಗೊಳ್ಳಬೇಕಿರುವುದು ಅನಿವಾರ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಶೈಲಜ ಕೆ. (2016). *ಪರಿಶಿಷ್ಟ ಜಾತಿ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ.* ಅಪ್ರಕಟಿತ ಪ್ರೌಢಪ್ರಬಂಧ, ಮೈಸೂರು ವಿವಿ.
- *Wage Indicator Foundation*. https://wageindicator.org/salary/minimum-wage/india/31024-karnataka/31025-agriculture-and-related-works
- Sruthi Paruthikad, & Sruthi Paruthikad. (2016, January 25). *The Gardens of Grapes: Farmers taste fruity success*. The New Indian Express. https://www.newindianexpress.com/states/kerala/2016/jan/25/the-gardens-of-grapes-farmers-taste-fruity-success-873209.html?botrequest=true&
- Jadhav, B. R. (2020, October 20). *Grape Expectations: Women's labour bears fruit in Nashik*. BusinessLine. https://www.thehindubusinessline.com/economy/agri-business/grape-expectations-womens-labour-bears-fruit-in-nashik/article32894720.ece